ಈ ಹುಡುಗ ಮಹದೇವ ಮೊನ್ನೆ ಪಶ್ಚಿಮಘಟ್ಟದ ಆ ದುರ್ಗಮ ಕಾಡುಗಳಲ್ಲಿ ತೊಲೆಯಂತೆ ಬೀಳುತ್ತಿದ್ದ ನೀರನ್ನು ನೋಡಿ, 'ಮ್ಯಾಡಂ ನೋಡಿ, ನೀರಿನ ಆಚೆ ದಪ್ಪ ದಪ್ಪ ಕಾಣುವ ಗುಡ್ಡಗಳು' ಎಂದು ತೋರಿಸುತ್ತಿದ್ದ, ನನಗೆ ಆಗ ಇದೆಲ್ಲ ನೆನಪಾಯಿತು. ಒಂದು ಸತ್ಯ ಇನ್ನೊಂದು ಮಿಥ್ಯ ಮತ್ತೊಂದು ಭ್ರಮೆ.

ಬಿಸಿ ಬಿಸಿಯಾದ ನೀರು ಮೇಲೆ ಸೂರ್ಯ ಯಂತ್ರದಿಂದ ಕಾಯ್ದು ಕೆಳಗೆ ಬರುತ್ತಿತ್ತು. ಡಿಪ್ರೆಶನ್ ಕಡಿಮೆ ಮಾಡಲು ಒಂದು ಸುಂದರ ಸ್ನಾನ ಅಗತ್ಯವಿತ್ತು. ಆತ ರಾತ್ರಿ ದೆವ್ವವಾಗಿ ಬಂದಿದ್ದಾನೆಯೇ? ಅಥವಾ ನಾನೇ ಹಾಗೆ ಕಲ್ಪಿಸಿಕೊಂಡೆನೆ, ಬಲ್ಲವರಾರು ಆದರೆ ನನ್ನ ಕಲ್ಪನೆಯಲ್ಲಿ ಅರಳಿದ ಭಯಕ್ಕೆ ನನ್ನ ಕಲ್ಪನಾ ಶಕ್ತಿಯೇ ಪರಿಹಾರ ಹುಡುಕುತ್ತದೆ, ಅದಕ್ಕೆ ನನ್ನ ಭಯಗಳು ನನ್ನಲ್ಲೇ ಹುಟ್ಟಿದವು ಎಂದುಕೊಂಡಳು.

ದೈತರನ್ನು ಸಂಹರಿಸಿದ ದೇವರು ನನ್ನ ದೆವ್ವವನ್ನು ಸಂಹರಿಸುವನು.

ಅರೆ ಸಮಸ್ಯೆಯೂ ನನ್ನಲ್ಲಿ.

ಪರಿಹಾರವೂ ನನ್ನಲ್ಲಿ.

ಬಿಸಿ ಬಿಸಿಯಾದ ನೀರು ತಲೆಯಿಂದ ಕಾಲಿನ ಹೆಬ್ಬೆರಳಿನವರಗೆ ಬೆಚ್ಚಗಾಗಿಸಿತ್ತು. ಇನ್ನು ಎರೆದುಕೊಳ್ಳಬೇಕು ಕೊರಳ, ಕಂಕಳ, ಎದೆ ತೊಡೆ ಸಂಧಿಗಳನ್ನು ತಿಕ್ಕಿ ತಿಕ್ಕಿ ಉಜ್ಜಬೇಕು. ಎಷ್ಟು ಹೊಲಸು ಈ ದೇಹ ನವರಂಧ್ರಗಳಿಂದ ಬಿಡುಗಡೆಯಾದ ತ್ಯಾಜ್ಯಗಳನ್ನು ದೇಹದಿಂದ ಹೊರಹಾಕಬೇಕು.

ಮನಸ್ಸು ಹೊಸ ಹೊಸ ವ್ಯಾಖ್ಯಾನಗಳನ್ನು ಸೃಷ್ಟಿಸುತ್ತದೆ. ಅದು ಸೃಷ್ಟಿಸುವಾಗ ಅದಕ್ಕೆ ಇತಿಹಾಸ ನೆನಪಿರುವುದಿಲ್ಲ. ಪ್ರತಿಯೊಬ್ಬ ಮನುಷ್ಯನು ತನ್ನ ಆತ್ಮದ ಬಾತ್ಮೀದಾರ. ಈ ಬಾತ್ಮೀದಾರ ಯಾವಾಗಲೂ ತನ್ನನ್ನು ಸಮರ್ಥಿಸಿಕೊಳ್ಳುತ್ತಾನೆ. ತನ್ನ ಹದಿನೇಳು ವರ್ಷದ ಉಗ್ರ ತಪಸ್ಸಿನಂಥ ಜೀವನವೂ ಒಂದು ನಾಟಕವೇ? ಹೌದು, ಉತ್ತರಗಳು ಹುಡುಕುವಾಗ ಈ ಹದಿನೈದು ವರ್ಷದ ಜೀವನ ಪಾಪಕ್ಕೆ ವಿರುದ್ಧವಾಗಿ ಇವಳೆ ಅಣಿಗೊಳಿಸಿರುವುದು. ಆ ಮಹಾದೇವನೆಂಬ ಹುಡುಗ ಈ ಹದಿನೇಳು ವರ್ಷದ ಇತಿಹಾಸವನ್ನು ನಾಶಮಾಡಲು ಬಂದಿದ್ದಾನೆ. ಮೊದಲಿನ ನನಗೆ ಈಗಿನ ನನಗೆ ಅಂತಹ ವ್ಯತ್ಯಾಸವಿಲ್ಲ ಎಂದು ಬಟ್ಟೆ ಏರಿಸಿಕೊಂಡು ಆ ಸ್ನಾನದ ಮನೆಯಿಂದ ಹೊರಬಂದಳು.

ಟ್ರಿಂಗ್ ಟ್ರಿಂಗ್ ಟ್ರಿಂಗ್ ಬೆಲ್ಲಿನ ಶಬ್ದ

ಬಟ್ಟೆ ಹಾಕಿಕೊಳ್ಳಲು ಪುರುಸೊತ್ತು ಇಲ್ಲದ ಜನ ಅಂದುಕೊಂಡು ಬಾಗಿಲು ತೆಗೆಯುತ್ತಾಳೆ.

ಅದೇ ಕೋಲ್ಗೇಟು ನಗು, ಸಿದ್ಧ ಮಾದರಿಯ ಮುಖಗಳು, ಕೈಯಲ್ಲಿ ಬೊಕ್ಕೆಗಳು, ಪ್ಲಾಸ್ಟಿಕ್ ಪ್ಯಾಕೇಟಿನಲ್ಲಿ ಹಣ್ಣುಗಳು, ಪ್ರತಿಯೊಂದೂ ರೆಡಿಮೇಡ್.

ಅವರು ಆರು ಜನ ಇದ್ದಾರೆ. ಅವಳ ಸಹೋದ್ಯೋಗಿಗಳು. ಒಬ್ಬಳಂತೂ ಈ ಸಂಸ್ಥೆಯ ಆರಂಭದಿಂದಲೂ ಇದ್ದಾಳೆ. ಅವಳಿಗೆ ವಿಕಾಸವಾದ ಎಂದರೇನು ಎನ್ನುವುದು ಗೊತ್ತಿಲ್ಲ.

'ಮೇಡಂ ನೀವು ಬಹಳ ತೆಳ್ಳಗಾಗಿದ್ದೀರಿ...', 'ಮೇಡಂ ಟ್ಯಾಬ್ಲೆಟ್ ತೆಗೆದುಕೊಂಡಿರಾ?', 'ಮೇಡಂ ನೀವು ಇನ್ನೂ ಬಹಳ ದಿನಗಳ ಕಾಲ ಹೀಗೆ ರೆಸ್ಟ್ ಮಾಡಬೇಕು...'

ಒಹೋ. ಅವಳ ಆಶಯ ನಾನು ಆಫೀಸಿಗೆ ಬರುವುದನ್ನು ತಪ್ಪಿಸಿ ಆರಾಮವಿರುವುದು ಆಗಿರಬಹುದು. ಅಥವಾ ನನ್ನ ಬಗ್ಗೆ ಕಾಳಜಿಯೋ. ಕಾಳಜಿ ಎಲ್ಲಿಂದ ಬಂತು, ಇದು ಒಂದು ಜೈವಿಕ ಸರಪಳಿ, ಒಬ್ಬ ಸತ್ತರೆ ಇನ್ನೊಬ್ಬನಿಗೆ ಆಹಾರ.

ಒಬ್ಬಳಂತೂ ಕಣ್ಣಲ್ಲೂ ನೀರು, ಅವರಮ್ಮ ಸತ್ತಾಗ ಹೀಗೆ ಅತ್ತಿದ್ದಳೋ ಇಲ್ಲೋ? ಈಗಂತೂ ತನ್ನ ಕಣ್ಣಾಲಿಗಳನ್ನು ಮುನಿರಾಬಾದ್ ಡ್ಯಾಮಿನಂತೆ ತುಂಬಿಕೊಂಡಿದ್ದಾಳೆ. ಮಹಾಮೌನಿ ಮಾತಾಡಲು ಅಗದಂತ ದುಃಖ ಥೂ! ನಾನು ಕಟ್ಟಿದ ಪ್ರಪಂಚವೆಲ್ಲವೂ ಒಂದು ನಾಟಕ ಕಂಪನಿ, ದಿನಾಲು ರಂಗಸಜ್ಜಿಕೆ, ಪ್ರದರ್ಶನ, ರೆಪರ್ಟರಿ. ಎಲ್ಲರಿಗೂ ಕುಳ್ಳಿರಿಸಿದಳು. ಚಹಾ ಮಾಡುತ್ತೇನೆಂದಳು. 'ಇಲ್ಲ ನೀವು ಆರಾಮವಾಗಿರಿ ನಾನು ಮಾಡುತ್ತೇನೆ' ಎಂದು ಎದ್ದಳು ಮಲ್ಲಿಕಾ. ಅವಳಿಗೆ ಸಹಾಯ ಮಾಡಲು ಇನ್ನೊಬ್ಬಳು ಅವಳ ಜೊತೆಗೆ ಹೋದಳು.

'ಡಾಕ್ಟರ್ ಏನೆಂದರು?'

'ಡಿಪ್ರೆಶನ್'

'ಡಿಪ್ರೆಶನ್ ಎಂದರೆ ಅದು ನಿಮಗೆ ಇದೇ ತಿಂಗಳು ಬರುತ್ತದಲ್ಲ?' ಕೇಳಿದರು ಅವರು. 'ಹೌದು, ಈ ತಿಂಗಳಿಗೂ ನನ್ನ ಡಿಪ್ರೆಶನ್‌ಗೂ ಸಂಬಂಧವಿದೆ. ನಿಮ್ಮ ಹುಟ್ಟು ಹಬ್ಬಗಳಂತೆ, ಸತ್ತ ಹಬ್ಬಗಳಂತೆ, ವಾಲೈಂಟೈನ್ ದಿನದಂತೆ ನನಗೆ ಈ ಡಿಪ್ರೆಶನ್ ಡೇ' ಎಂದಳಿವಳು.